ಶ್ರೀ ಎಸ್. ರಮೇಶ್:- ತಮಗೆ ತಿಳಿದಿರುವಂತೆ ಮಂಡ್ಯ ಜಿಲ್ಲಾ ಪರಿಷತ್‌ನವರು ಮುಂದೆ ಬಂದಿದ್ದಾರೆ. ಅವರಿಗೂ ನಾವು ಅವಕಾಶ ಕೊಡುತ್ತೇವೆಂದು ಹೇಳಿದ್ದೇವೆ. ಸಂಘ-ಸಂಸ್ಥೆಗಳಿಂದ ಮಾಡುವುದಕ್ಕೆ ಇನ್ನು ನಾವು ಕ್ರಮ ತೆಗೆದುಕೊಂಡಿಲ್ಲ. ಆಂತಹ ಸಂದರ್ಭ ಬಂದಾಗ ಯೋಚನೆ ಮಾಡೋಣ.

ಅಧ್ಯಕ್ಷರು:- ಶ್ರೀ ಬಿ. ಆರ್. ಗುರುದೇವ್‌ರವರೇ, ತಮ್ಮ ಪ್ರಶ್ನೆ ಕೇಳಿ.

ಆಲೂರು ಪಟ್ಟಣದಲ್ಲಿ ಕ್ರೀಡಾಂಗಣ ನಿರ್ಮಾಣ

ಶ್ರೀ ಬಿ. ಆರ್. ಗುರುದೇವ್ (ಸಕಲೇಶಪುರ):- ಮಾನ್ಯ ಯುವಜನ ಸೇವಾ, ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಆಲೂರು ಪಟ್ಟಣದಲ್ಲಿ ಕ್ರೀಡಾಂಗಣದ ಅವಶ್ಯಕತೆ ಮತ್ತು ಬಾಳುಪೇಟೆಯಲ್ಲಿರುವ ಕ್ರೀಡಾಂಗಣವನ್ನು ಹೊನಲು ಬೆಳಕು ಕ್ರೀಡಾಂಗಣವನ್ನಾಗಿ ಪರಿವರ್ತಿಸುವ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಇ) ಈ ಯೋಜನೆಗಳನ್ನು ಯಾವಾಗ ಕಾರ್ಯಗತ ಗೊಳಿಸಲಾಗುವುದು?

ಶ್ರೀ ಎಸ್. ರಮೇಶ್ (ಯುವಜನ ಸೇವಾ, ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-

ಅ) ಹೌದು.

ಆ) ಆಲೂರು ಪಟ್ಟಣದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಲು ಸೂಕ್ತವಾದ ನಿವೇಶನವನ್ನು ಹುಡುಕಲಾಗುತ್ತಿದೆ. ಸೂಕ್ತವಾದ ನಿವೇಶನ ದೊರೆತ ನಂತರವೇ ಕ್ರೀಡಾಂಗಣದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸುವುದನ್ನು ಪರಿಗಣಿಸಲಾಗುವುದು. ಬಾಳುಪೇಟೆಯ ಖಾಸಗೀ ಶಿಕ್ಷಣ ಸಂಸ್ಥೆಗೆ, ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ ಹೊನಲು ಬೆಳಕಿನ ವ್ಯವಸ್ಥೆಗೆ ಸಹಾಯಧನ ಮಂಜೂರು ಮಾಡಲು ಪ್ರಸ್ತಾವನೆಯನ್ನು ಕಳುಹಿಸಬೇಕೆಂದು ಕೋರಲಾಗಿದೆ. ಕೇಂದ್ರ ಸರ್ಕಾರದಿಂದ ಧನಸಹಾಯ ಮಂಜೂರು ಆದ ಕೂಡಲೇ ಸದರಿ ಸಂಸ್ಥೆಗೆ ಬಿಡುಗಡೆ ಮಾಡಲಾಗುವುದು.

ಶ್ರೀ ಬಿ. ಆರ್. ಗುರುದೇವ್:- ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ತಿಳಿಸಿರುವಂತೆ ಆಲೂರು ಪಟ್ಟಣದಲ್ಲಿ ಈಗಾಗಲೇ ಒಂದು ಕ್ರೀಡಾಂಗಣವನ್ನು ಕಟ್ಟುವುದಕ್ಕೆ ಈ ಒಂದು ಇಲಾಖೆ ಅವಕಾಶ ಮಾಡಿಕೊಡುತ್ತಿದೆ ಎಂದು ಹೇಳಿದ್ದಾರೆ. ಅವರು ಯಾವಾಗ ಮಾಡುತ್ತಾರೆ ಎಂದು ಹೇಳಿಲ್ಲ. ಮತ್ತು ಈ ಒಂದು ಕ್ರೀಡಾಂಗಣಕ್ಕೆ ೮ ಎಕರೆ ಜಮೀನನ್ನು ಸರ್ಕಾರದ ವತಿಯಿಂದ ಬಿಡಿಸಿಕೊಟ್ಟರೆ ಈ ವರ್ಷವೇ ತೆಗೆದುಕೊಳ್ಳುತ್ತೇವೆ ಎನ್ನುವ ಭರವಸೆ ಕೊಟ್ಟಿದ್ದಾರೆ. ಈಗಾಗಲೇ ಅಲ್ಲಿ ನಡೆಯುತ್ತಿರುವ ಕಾಲೇಜು ಪಕ್ಕದಲ್ಲಿ ಒಂದು ಜಾಗವನ್ನು ನಾವು ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚೆ ಮಾಡಿ, ಸದರಿ ಜಾಗವನ್ನು ಇಲಾಖೆಗೆ ಬಿಟ್ಟು ಕೊಡಬೇಕೆಂದು ಕೇಳಿದ್ದೇವೆ. ಆ ದೃಷ್ಟಿಯಲ್ಲಿ ಇದೇ ವರ್ಷ ಆ ತಾಲ್ಲೂಕಿಗೆ ಕ್ರೀಡಾಂಗಣವನ್ನು ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ರಮೇಶ್:- ನಾನು ಮಂತ್ರಿಯಾದ ತಕ್ಷಣ ಮೊಟ್ಟಮೊದಲು 'ಹೂಂ' ಎಂದಿದ್ದು ಶ್ರೀಮಾನ್ ಗುರುದೇವ್‌ರವರ ಪ್ರಶ್ನೆಗೆ. ನೀವು ಜಾಗ ಕೊಡಿ, ನಾವು ಕ್ರೀಡಾಂಗಣ ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮತ್ತು ಈಗ ಜಾಗ ಕೊಡುತ್ತೇವೆಂದು ಹೇಳುತ್ತಿದ್ದೀರಿ. ನೀವು ಯಾವಾಗ ಜಾಗ ಕೊಡುತ್ತೀರೋ, ಆ ಕೂಡಲೇ ನಾವು ಕ್ರೀಡಾಂಗಣ ಕಟ್ಟಲು ಪ್ರಾರಂಭ ಮಾಡುತ್ತೇವೆ.

ಶ್ರೀ ಬಿ. ಆರ್. ಗುರುದೇವ್:- ನನ್ನ ಕ್ಷೇತ್ರಕ್ಕೆ ಎರಡು ತಾಲ್ಲೂಕುಗಳು ಬರುತ್ತವೆ. ಸಕಲೇಶಪುರದಲ್ಲಿ ಈಗಾಗಲೇ ಮಾಡಿಕೊಟ್ಟಿದ್ದಾರೆ. ಆಲೂರು .ತಾಲ್ಲೂಕಿಗೆ ಇನ್ನೊಂದು ಮಾಡಿಕೊಡುತ್ತೇವೆಂದು ಭರವಸೆ ಕೊಡುತ್ತಿದ್ದಾರೆ.

ಅಧ್ಯಕ್ಷರು:- ಪ್ರಶ್ನೋತ್ತರ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು.

ಕೃಷ್ಣ ಜಲಾನಯನ ಏತ ನೀರಾವರಿ ನಿಗಮ.

೩೮೨ (೨೧೫೭) ಶ್ರೀ ಅಜಯ್ ಕುಮಾರ್ ಸರನಾಯಕ್ (ಬಾಗಲಕೋಟೆ):- ಮಾನ್ಯ ಸಣ್ಣ ನೀರಾವರಿ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮ ಯಾವಾಗ ಸ್ಥಾಪನೆಯಾಯಿತು?

ಆ) ಇಲ್ಲಿಯವರೆಗೆ ನಿಗಮದಿಂದ ವಿಜಾಪುರ ಜಿಲ್ಲೆಯಲ್ಲಿ ಮೋಜಣಿ ಕೈಗೊಂಡಿರುವ ಏತ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು?

ಇ) ನಿಗಮದಿಂದ ಕಾರ್ಯಗತ ಗೊಳಿಸಲಾಗುತ್ತಿರುವ ಏತ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಈ) ಬಾಗಲಕೋಟೆ ತಾಲ್ಲೂಕಿನಲ್ಲಿ ಯಾವುದಾದರೂ ಹೊಸ ಏತ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಪ್ರಸ್ತಾವನೆ ಇದೆಯೇ?

ಈ) ಹಾಗಿದ್ದಲ್ಲಿ, ಅವುಗಳನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮ, ಬಿಜಾಪುರ, ಈ ನಿಗಮವು ೧೯೮೬ರ ಜೂನ್ ೯ ರಂದು ಸ್ಥಾಪನೆಯಾಯಿತು ಹಾಗೂ ೧೯೮೭ರ ಮಾರ್ಚ್ ೩೦ರಂದು ಕಂಪನಿ ಕಾಯ್ದೆ ೧೯೫೬ರನ್ವಯ ಸರ್ಕಾರದ ಕಂಪನಿ ಎಂದು ನೊಂದಾಯಿಸಲಾಯಿತು.

ಆ) ವಿಜಾಪುರ ಜಿಲ್ಲೆಯಲ್ಲಿ ವಿವರವಾದ ತನಿಖೆಗಾಗಿ ಮೋಜಣಿ ಕೈಗೊಂಡ ಏತ ನೀರಾವರಿ ಯೋಜನೆಗಳ ಸಂಖ್ಯೆ ೭ ಮತ್ತು ಪ್ರಾಥಮಿಕ ತನಿಖೆಯ ಮೋಜಣಿ ಕೈಗೊಂಡ ಏತ ನೀರಾವರಿ ಯೋಜನೆಗಳ ಸಂಖ್ಯೆ ೯.

ಇ) ಕಾರ್ಯಗತಗೊಳಿಸಲಾಗುತ್ತಿರುವ ಏತ ನೀರಾವರಿ ಯೋಜನೆಗಳ ಸಂಖ್ಯೆ ೨. ತಾಲ್ಲೂಕು ವಿವರ ಈ ರೀತಿ ಇದೆ.